4

## ಕರ್ನಾಟಕದ ‘ಲಾಂಗ್ ಮಾರ್ಚ್’

ಸಾಮಾಜಿಕ ಚಳವಳಿಗಳ ಒಂದು ಶತಮಾನದ ಈ ‘ಲಾಂಗ್ ಮಾರ್ಚ್’ ಜೊತೆಗೇ ವಿಕಾಸಗೊಂಡ ಕನ್ನಡ ಕೃತಿಗಳು ಕರ್ನಾಟಕ ಸಂಸ್ಕೃತಿಯಲ್ಲಿ ಹಬ್ಬಿದ ರೀತಿಗಳ ಅಧ್ಯಯನ ನಿಜಕ್ಕೂ ಕುತೂಹಲಕರವಾಗಿರಬಲ್ಲದು. 2018ರ ಹೊತ್ತಿಗೆ ‘ಚಿರಸ್ಮರಣೆ’ ಹದಿನಾಲ್ಕು ಮುದ್ರಣಗಳನ್ನು ಕಂಡಿತ್ತು; ಅದರ ನಲವತ್ತು ಸಾವಿರಕ್ಕೂ ಹೆಚ್ಚು ಪ್ರತಿಗಳು ಈವರೆಗೆ ಮಾರಾಟವಾಗಿವೆ; ಕ್ರಿಯಾಶೀಲ ವೇದಿಕೆಗಳ ಓದು–ಕಮ್ಮಟಗಳ ಮೂಲಕ, ರಂಗರೂಪಗಳ ಮೂಲಕ ‘ಚಿರಸ್ಮರಣೆ’ ಇಂದಿಗೂ ಜೀವಂತ ಪಠ್ಯವಾಗಿ ಹಬ್ಬುತ್ತಲೇ ಇದೆ. ದಲಿತ ಚಳವಳಿಯ ಭಾಗವೇ ಆಗಿರುವ ದೇವನೂರರ ‘ಕುಸುಮಬಾಲೆ’ಯ ಸುಮಾರು ಅರವತ್ತು ಸಾವಿರ ಪ್ರತಿಗಳು ಮಾರಾಟವಾಗಿವೆ. ರಂಗಮಂಡನೆ, ಮೌಖಿಕ ಮಂಡನೆಗಳ ಮೂಲಕವೂ ‘ಕುಸುಮಬಾಲೆ’ ತಲುಪಿದೆ. 1975ರಲ್ಲಿ ಪ್ರಕಟವಾದ ಸಿದ್ಧಲಿಂಗಯ್ಯನವರ ‘ಹೊಲೆ ಮಾದಿಗರ ಹಾಡು’ ಸ್ವತಂತ್ರ ಸಂಕಲನವಾಗಿ ಹಾಗೂ ಕವಿಯ ಸಮಗ್ರ ಸಂಪುಟಗಳಲ್ಲಿ ಸೇರಿ ನಲವತ್ತಕ್ಕೂ ಹೆಚ್ಚು ಮುದ್ರಣಗಳನ್ನು ಕಂಡಿದೆ; ಸಂಕಲನದ ಎಪ್ಪತ್ತು ಸಾವಿರಕ್ಕೂ ಹೆಚ್ಚು ಪ್ರತಿಗಳು ಮಾರಾಟವಾಗಿವೆ. ಈ ಕವಿತೆಗಳು ಹೊಸಹೊಸ ಹಾಡುಗಾರರ ಮೂಲಕ ಹೊಸ ತಲೆಮಾರುಗಳ ಲಕ್ಷಾಂತರ ಜನರನ್ನು ಮುಟ್ಟಿವೆ; ಹೊಸ ಕವಿಗಳನ್ನು ತಲುಪಿ ಸಾವಿರಾರು ಕವಿತೆಗಳನ್ನು ಬರೆಸಿವೆ; ಕೊರೊನಾ ಲಾಕ್‌ಡೌನ್ ಕಾಲದಲ್ಲಿ ಸರ್ಕಾರಗಳ ನಿರ್ದಯತೆಗೆ ಬಲಿಯಾದ ಲಕ್ಷಾಂತರ ದಿನಗೂಲಿ ಕಾರ್ಮಿಕರು ದಾರುಣ ಸ್ಥಿತಿಯಲ್ಲಿ ಕಾಲ್ನಡಿಗೆಯಲ್ಲಿ ಬರುತ್ತಿದ್ದ ಚಿತ್ರಗಳ ಜೊತೆಗೆ ಸಿದ್ಧಲಿಂಗಯ್ಯನವರ ‘ಹಸಿವಿನಿಂದ ಸತ್ತೋರು ಸೈಜುಗಲ್ಲು ಹೊತ್ತೋರು’ ಪದ್ಯ ಮತ್ತೆ ಮತ್ತೆ ಸಾಮಾಜಿಕ ಜಾಲತಾಣಗಳಲ್ಲಿ ಪ್ರಸಾರವಾಗುತ್ತಿತ್ತು. ಈ ಬಗೆಯ ಕೃತಿಗಳ ನಿರಂತರ ಸಾಮಾಜಿಕ ಪ್ರಸಾರದ ಪರಿಣಾಮ ಅತ್ಯಂತ ಮುಖ್ಯವಾದುದು. ಕೋಮುವಾದಿ ಭಾರತದ ನರಕದರ್ಶನ ಮಾಡಿಸುತ್ತಲೇ ಜಾತ್ಯತೀತ ಭಾರತ ನಿರ್ಮಾಣದ ಸಾಧ್ಯತೆಗಳನ್ನು ಹುಡುಕುವ ‘ಚಿದಂಬರ ರಹಸ್ಯ’ದ ಒಂದು ಲಕ್ಷಕ್ಕೂ ಹೆಚ್ಚು ಪ್ರತಿಗಳು ಮಾರಾಟವಾಗಿವೆ. ‘ಗಾಂಧಿ ಬಂದ’ ಕಾದಂಬರಿಯ ಸುಮಾರು ಇಪ್ಪತ್ತು ಸಾವಿರ ಪ್ರತಿಗಳು ಮಾರಾಟವಾಗಿವೆ. ಇಂಥ ಅನೇಕ ಕೃತಿಗಳ ಮೂಲ ಬೇರಿನಂತಿರುವ ಕ್ಲಾಸಿಕ್‌ಗಳಾದ ‘ಕಾನೂರು ಹೆಗ್ಗಡಿತಿ’ ಮತ್ತು ‘ಮಲೆಗಳಲ್ಲಿ ಮದುಮಗಳು’ ಪ್ರತಿ ವರ್ಷ ಮರುಮುದ್ರಣವಾಗುತ್ತಲೇ ಇವೆ.

ಸಾಹಿತ್ಯ ಕೃತಿಗಳ ‘ಪ್ರಭಾವ ಅಧ್ಯಯನ’ದ ವಿಧಾನಗಳು ಕನ್ನಡ ಸಾಹಿತ್ಯಾಧ್ಯಯನದಲ್ಲಿ ಈವರೆಗೂ ರೂಪುಗೊಂಡೇ ಇಲ್ಲ. ಆದರೂ ಈ ಬಗೆಯ ಕೃತಿಗಳ ಪ್ರಸಾರಗಳ ಅಂದಾಜು ಅಂಕಿಅಂಶಗಳನ್ನು ಪ್ರಾತಿನಿಧಿಕವಾಗಿ ನೋಡಿದರೂ ಕನ್ನಡದಲ್ಲಿ ಇಂಥ ಚಾರಿತ್ರಿಕ ಮಹತ್ವದ ಕೃತಿಗಳು ಸೃಷ್ಟಿಸಿರುವ ಪರಿಣಾಮ ಹಾಗೂ ಅವು ಹಬ್ಬಿಸಿರುವ ಸಾಮಾಜಿಕ ಚಳವಳಿಗಳ ಚೈತನ್ಯದ ಸ್ವರೂಪ ಸ್ಪಷ್ಟವಾಗುತ್ತದೆ. ಈ ಬಗೆಯ ಮುಖ್ಯ ಕೃತಿಗಳ ಆಶಯವನ್ನು ಹೊಣೆಯರಿತ ಕನ್ನಡ ಸಾಹಿತ್ಯ ಮುಂದುವರಿಸಿಕೊಂಡೇ ಬಂದಿದೆ; ಸಾಮಾಜಿಕ ನ್ಯಾಯ, ಜಾತಿಸಮಾನತೆಯ ಜೊತೆಗೆ ಲಿಂಗಸಮಾನತೆಯನ್ನೂ ಎತ್ತಿ ಹಿಡಿಯುತ್ತಲೇ ಬಂದಿದೆ.

ಆದ್ದರಿಂದಲೇ, ಈ ಬಗೆಯ ಆರೋಗ್ಯಕರ ಸಾಮಾಜಿಕ ಪ್ರಭಾವವುಳ್ಳ ಕೃತಿಗಳ ವ್ಯಾಪಕ ಪ್ರಸಾರವನ್ನು ಅಗ್ಗದ ಮಾರುಕಟ್ಟೆ ಸ್ಟಂಟುಗಳು ಹಾಗೂ ವ್ಯವಸ್ಥಿತ ಉಬ್ಬಿಸುವಿಕೆ (ಹೈಪ್) ಮೂಲಕ ಜನರ ‘ಕಣ್ಣಿಗೆ ಬೀಳುವ’ ಸಾಧಾರಣ ಪುಸ್ತಕಗಳ ಪ್ರಸಾರದ ಜೊತೆಗೆ ಹೋಲಿಸಬಾರದು. ಯಾಕೆಂದರೆ ಓದುಗರ ಅಭಿರುಚಿಯನ್ನು ಭ್ರಷ್ಟಗೊಳಿಸಿ, ಅವರನ್ನು ಜಡರಾಗಿಯೇ ಇರಿಸಬಯಸುವ ‘ಹೈಪ್ಡ್’ ಕೃತಿಗಳು ಓದುಗರ ಪ್ರಜ್ಞೆಯನ್ನು ಮಂಕಾಗಿಸುತ್ತಿರುತ್ತವೆ. ಆದರೆ ‘ಚಿರಸ್ಮರಣೆ’, ‘ಕುಸುಮಬಾಲೆ’, ‘ಕಾನೂರು ಹೆಗ್ಗಡಿತಿ’, ‘ಚೋಮನ ದುಡಿ’, ‘ಹೊಲೆಮಾದಿಗರ ಹಾಡು’, ‘ಚಿದಂಬರ ರಹಸ್ಯ’, ‘ಗಾಂಧಿ ಬಂದ’, ಕುವೆಂಪು ಅವರ ‘ವಿಚಾರಕ್ರಾಂತಿಗೆ ಆಹ್ವಾನ’, ಲಂಕೇಶರ ‘ಟೀಕೆ ಟಿಪ್ಪಣಿ’ ಥರದ ಕೃತಿಗಳ ನಿರಂತರ ಪ್ರಸಾರ ಜನಮಾನಸದಲ್ಲಿ ಸಮಾನತೆಯ ಪ್ರಜ್ಞೆಯನ್ನು ಬೆಳೆಸುತ್ತಿರುತ್ತದೆ. ಇಂಥ ಪುಸ್ತಕಗಳು ಸದಾ ಸಂಸ್ಕೃತಿಯ ಕೇಂದ್ರದಲ್ಲಿ ಇರುವಂತೆ ನೋಡಿಕೊಳ್ಳುವುದೆಂದರೆ, ಸಾಮಾಜಿಕ ಚಳವಳಿಗಳ ದೀಪ ನಿರಂತರವಾಗಿ ಬೆಳಕು ಚೆಲ್ಲುವಂತೆ ಮಾಡುವ ನಿಟ್ಟಿನ ಮುಖ್ಯ ಕರ್ತವ್ಯವೂ ಹೌದು. ಇವತ್ತು ತಮ್ಮ ಪಾಡಿಗೆ ತಾವು ಇಂಥ ಕೆಲಸ ಮಾಡುತ್ತಿರುವ ನವ ತರುಣ, ತರುಣಿಯರು ಕನ್ನಡ ಸಂಸ್ಕೃತಿಯ ಹೊಸ ಆಶಾಕಿರಣಗಳಾಗಿದ್ದಾರೆ.

ಈ ಬರಹ ಸಾಮಾಜಿಕ, ರಾಜಕೀಯ ಚಳವಳಿಗಳನ್ನು ಶೋಧಿಸುವ ಕೆಲವೇ ಕೃತಿಗಳನ್ನು ಚರ್ಚಿಸಿದೆಯಾದರೂ ಈ ಚಳವಳಿಗಳಿಗೆ ಬೇರೆ ಬೇರೆ ರೀತಿಯಲ್ಲಿ ಪೂರಕವಾಗಿರುವ ಇತರ ಕೃತಿಗಳ ಪ್ರಭಾವವನ್ನು ಕಡೆಗಣಿಸಲಾಗದು. ಕನ್ನಡಿಗರ ಆರೋಗ್ಯವನ್ನು ಹಲಬಗೆಯಲ್ಲಿ ಪೊರೆದಿರುವ ಮಹತ್ವದ ಕಾದಂಬರಿಗಳಾದ ‘ಮರಳಿ ಮಣ್ಣಿಗೆ’, ‘ಸಂಸ್ಕಾರ’, ‘ಕರ್ವಾಲೋ’, ‘ಮುಸ್ಸಂಜೆಯ ಕಥಾಪ್ರಸಂಗ’, ‘ಶಿಕಾರಿ’; ‘ಮಹಾಚೈತ್ರ’ ‘ತುಘಲಕ್’ ‘ಗುಣಮುಖ’ದಂಥ ನಾಟಕಗಳು; ದೇವಯ್ಯ ಹರವೆಯವರ ‘ದಲಿತ ಸಾಹಿತ್ಯ ಮತ್ತು ಇತರ ಲೇಖನಗಳು’, ಡಿ.ಆರ್. ನಾಗರಾಜ್ ಅವರ ‘ಸಾಹಿತ್ಯ ಕಥನ’ ಮತ್ತು ‘ಸಂಸ್ಕೃತಿ ಕಥನ’, ಕಲಬುರ್ಗಿಯವರ ‘ಮಾರ್ಗ’ ಸಂಪುಟಗಳು – ಇಂಥ ಹತ್ತಾರು ಕೃತಿಗಳು ನಿರಂತರ ಚರ್ಚೆಯಲ್ಲಿರಲೇಬೇಕು. ವೀಣಾ ಶಾಂತೇಶ್ವರರ ‘ಗಂಡಸರು’, ಎಂ.ಕೆ. ಇಂದಿರಾ ಅವರ ‘ಫಣಿಯಮ್ಮ’, ಸಾರಾ ಅಬೂಬಕರರ ‘ಚಂದ್ರಗಿರಿಯ ತೀರದಲ್ಲಿ’ ಥರದ ಬಹುಚರ್ಚಿತ ಕಾದಂಬರಿಗಳು ಅಥವಾ ಕನ್ನಡದ ಒಟ್ಟು ಮಹಿಳಾ ಕಾವ್ಯ ಓದುಗಿಯರ ಮತ್ತು ಓದುಗರ ಮನಸ್ಸಿನಲ್ಲಿ ಹುಟ್ಟು ಹಾಕುವ ಪ್ರಶ್ನೆಗಳು ಹಾಗೂ ಅವು ಸಾಮಾಜಿಕ ಬದಲಾವಣೆಗೆ ಅವರನ್ನು ಮಾನಸಿಕವಾಗಿ ಸಿದ್ಧಪಡಿಸುವ ರೀತಿ ಕೂಡ ಇಷ್ಟೇ ಮಹತ್ವದ್ದು. ಸಾಹಿತ್ಯ ಪ್ರಸಾರದಲ್ಲೂ ಗಂಡಸರ ಯಜಮಾನಿಕೆ ಮುಂದುವರಿದಿರುವುದರಿಂದ



ದಲಿತ ಚಳವಳಿಯನ್ನು ಕಟ್ಟಿದ ಮೂವರು ಬುದ್ಧಿಜೀವಿಗಳು: ಬಿ.ಕೃಷ್ಣಪ್ಪ, ದೇವನೂರ ಮಹಾದೇವ, ಸಿದ್ದಲಿಂಗಯ್ಯ